ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp. 74-83.
©IIMRD, Mysuru
www.iimrd.com

# ಕನ್ನಡ ವೃತ್ತಿ ರಂಗಭೂಮಿಯ ಕ್ಲಾಸಿಕ್ ಮಾಸ್ಟರ್ ಪೀಸ್ 'ಸಂಪತ್ತಿಗೆ ಸವಾಲ್' ನಾಟಕದ ವಿಮರ್ಶಾತ್ಮಕ ನೋಟ

ಭವಾನಿ ಎಸ್[1] ಮತ್ತು ಡಾ. ನಂದೀಶ್ ಹಂಚೆ[2]

[1]ಸಂಶೋಧಕರು, ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು.

[2]ಸಹಾಯಕ ಪ್ರಾಧ್ಯಾಪಕರು, ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

## ಸಾರಾಂಶ (Abstract)

*ರಂಗಭೂಮಿ ಹಲವಾರು ಲಲಿತಕಲೆಗಳ ಸಂಗಮ ಕ್ಷೇತ್ರ. ಅದರ ಪ್ರಮುಖ ಜೀವಾಳ 'ನಾಟಕ.' ಕಾಮನಬಿಲ್ಲಿನಂತೆ ರಸವೊಸರಿಸುವ ಲಲಿತಕಲೆಗಳ ಸಮ್ಮಿಳಿತವಾಗಿರುವ ನಾಟಕವೆಂದರೆ, "ಮನಸ್ಸನ್ನು ರಂಜಿಸಿ ಆತ್ಮವನ್ನು ಮೇಲೆತ್ತುವ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪ, ಅಭಿನಯಗಳು ಮೇಳವಿಸಿ ರಸ ನಿರೂಪಣೆ ಮಾಡುವ ಉದ್ದೇಶದಿಂದ ಮೈತಳೆದ ನಾಟಕ ಬಹು ಜನಪ್ರಿಯವಾದ ಒಂದು ದೃಶ್ಯಕಾವ್ಯವಾಗಿದೆ" ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಪ್ರಸ್ತುತ ಲೇಖನವು 'ಸಂಪತ್ತಿಗೆ ಸವಾಲ್' ನಾಟಕದ ಬಗ್ಗೆ ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದ್ದು, ಒಮ್ಮೆ ಈ ನಾಟಕವನ್ನು ವೀಕ್ಷಿಸಿದ ರಾಜಕುಮಾರ್‌ರವರು ಈ ನಾಟಕವನ್ನು ಚಲನಚಿತ್ರವಾಗಿ ಬೆಳ್ಳಿ ತೆರೆಯ ಮೇಲೆ ತರಲು ಕೇಳಿಕೊಂಡರಂತೆ. ಆಗ ಅವರು ಭದ್ರಿಯ ಪಾತ್ರದಲ್ಲಿ ಅಭಿನಯಿಸಲು ಬಯಸಿದರು. ಮುಂದೆ "ಸಂಪತ್ತಿಗೆ ಸವಾಲ್" ಸಿನಿಮಾ ಆಗಿ ಭರ್ಜರಿ ಯಶಸ್ವಿಯಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.*

**ಮುಖ್ಯಪದಗಳು(Keywords):** *ವೃತ್ತಿ, ರಂಗಭೂಮಿ, ನಾಟಕಗಳು, ದೃಶ್ಯಕಾವ್ಯ, ಸಂಗೊಳ್ಳಿ ರಾಯಣ್ಣ.*

## ಪೀಠಿಕೆ

ರಂಗಭೂಮಿಯ ನಾಟಕಗಳು ಹಲವು ರೀತಿಯ ಅಭಿವ್ಯಕ್ತಿಗಳನ್ನು ಒಳಗೊಂಡಿವೆ. ಪುರಾಣಗಳ ವಿಚಾರಗಳನ್ನು ಆಧರಿಸಿರುವ ನಾಟಕಗಳು, ಐತಿಹಾಸಿಕ ಘಟನೆ, ವ್ಯಕ್ತಿ, ವಿಷಯಗಳನ್ನು ಆಧರಿಸಿ ರಚನೆಯಾಗಿರುವಂತಹ ನಾಟಕಗಳು, ಧಾರ್ಮಿಕ ವಿಚಾರಗಳನ್ನು ಮೇಳೈಸಿಕೊಂಡಿರುವ ನಾಟಕಗಳು, ಸಾಮಾಜಿಕ ನಾಟಕಗಳು, ಇವುಗಳೆಲ್ಲವೂ ಕೂಡ ಬಿತ್ತರ ಮಾಡುವ ಮೌಲ್ಯಗಳು ಭಿನ್ನವಾಗಿವೆ. [1]"ನಮ್ಮ ರಂಗಭೂಮಿ ದೇವಾನು ದೇವತೆಗಳಿಂದ, ದಾನವರಿಂದ, ರಾಜ ರಾಣಿಯರಿಂದ ಕಿಕ್ಕಿರಿದು ತುಂಬಿ ಹೋಗಿದೆ. ಇನ್ನಾದರೂ ಇವರಿಗೆ ಸ್ವಲ್ಪ ವಿಶ್ರಾಂತಿಕೊಟ್ಟು ಮಾನವರಲ್ಲಿ ಇರುವ ದೈವವನ್ನು ಕಾಣುವ ಕಾಲ ಬರಬೇಕಾಗಿದೆ" ಎಂದು ಹರೀಂದ್ರನಾಥ ಚಟ್ಟೋಪಾಧ್ಯಾಯರು 1931ರಲ್ಲಿ ಆಂಧ್ರನಾಟಕ ಪರಿಷತ್ತಿನ ಅಧ್ಯಕ್ಷ

*Please cite this article as: ಭವಾನಿ.ಎಸ್. ಮತ್ತು ಡಾ. ನಂದೀಶ್ ಹಂಚೆ, (2022). ಕನ್ನಡ ವೃತ್ತಿರಂಗಭೂಮಿಯ ಕ್ಲಾಸಿಕ್ ಮಾಸ್ಟರ್ ಪೀಸ್. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 74–83.*

ಸ್ಥಾನದಿಂದ ಹೇಳಿದಾಗ ಈ ಮಾತು ಆಧುನಿಕ ರಂಗಭೂಮಿಯ ಪರಾಣಿಕ ನಾಟಕಗಳ ಬಗೆಗೆ ಜನರು ಹೊಂದಿರುವ ತಿರಸ್ಕಾರ ಮನೋಭಾವನೆಗೆ ಪುಷ್ಠಿ ನೀಡಿದಂತಾಯಿತು. ಸುಸಂಸ್ಕೃತ ಜನರಲ್ಲಿ ಪ್ರಚಲಿತ ರಂಗಭೂಮಿಯ ನಾಟಕಕಗಳ ವಸ್ತುಗಳು ಬದಾಲಾಗಬೇಕು ಎಂಬ ಭಾವನೆಯು ಚಿಗುರೊಡೆಯಲಾರಂಭಿಸಿತು. ಪಾಶ್ಚಿಮಾತ್ಯ ದೇಶಗಳ ರಂಗಭೂಮಿಗಳೊಡನೆ ಸಂಪರ್ಕ, ಇಂಗ್ಲೀಷ್ ಶಿಕ್ಷಣ, ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿ ಹಾಗೂ ಆಗತಾನೆ ಪ್ರವರ್ಧಮಾನಕ್ಕೆ ಬರುತಿದ್ದ ವಿಲಾಸಿ ರಂಗಭೂಮಿಯ ಪೈಪೋಟಿ ಈ ಎಲ್ಲದರ ಪರಿಣಾಮದಿಂದಾಗಿ ವೃತ್ತಿರಂಗಭೂಮಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಪೌರಾಣಿಕ, ಐತಿಹಾಸಿಕ ನಾಟಕಗಳ ಜೊತೆ-ಜೊತೆಯಾಗಿ ಸಮಾಜದ ಬದುಕು ಬವಣೆಗಳ ಸುತ್ತ ಎಣೆದಿರುವ ಸಮಾಜಿಕ ನಾಟಕಗಳನ್ನು ರಂಗದ ಮೇಲೆ ತರಬೇಕಾಯಿತು.

ಅವಿಭಜಿತ ವಿಜಾಪುರ ಜಿಲ್ಲೆಯ ಹುನುಗುಂದ ತಾಲ್ಲೂಕಿನ 'ಸೂಳೇಬಾವಿಯ' ನೇಕಾರ ಕುಟುಂಬದಲ್ಲಿ ಜನಿಸಿದ (1924) ಪುಂಡಲೀಕಪ್ಪ ಧುತ್ತರಗಿಯವರು ತಂದೆಯೊಂದಿಗೆ ಬಾಲ್ಯದಲ್ಲೆ ನಾಟಕ ಕಂಪನಿ ಸೇರಿದರು. ಶ್ರೀಯುತರು ಕಳೆದ ಆರು ದಶಕಗಳಿಂದ ರಂಗಭೂಮಿಯ ಎಲ್ಲ ಕ್ಷೇತ್ರಗಳಲ್ಲಿಯು ಕೆಲಸ ಮಾಡಿದ್ದಾರೆ. ಇವರು ನಟರು, ನಿರ್ದೇಶಕರು ಹಾಗೂ ಒಂದೂವರೆ ದಶಕಕ್ಕೂ ಹೆಚ್ಚು ಕಾಲ ಕಂಪನಿ ನಡೆಸಿದ ಮಾಲೀಕರು ಹೌದು.

**ಸಂಪತ್ತಿಗೆ ಸವಾಲ್**

ಕನ್ನಡ ವೃತ್ತಿರಂಗಭೂಮಿಯ ಸಾಮಾಜಿಕ ನಾಟಕಗಳಲ್ಲಿಯೇ 'ಕ್ಲಾಸಿಕ್ ಮಾಸ್ಟರ್ ಪೀಸ್' ಎಂಬ ಹೆಗ್ಗಳಿಕೆಗೆ ಪಾತ್ರವಾದ ನಾಟಕವಿದು. ವರ್ಗ ಸಂಘರ್ಷವನ್ನಾಧರಿಸಿದ ಹಲವಾರು ಶಿಷ್ಟ ಕನ್ನಡ ಸಾಹಿತ್ಯದ ಕೃತಿಗಳು ಪ್ರಭಾವಿಸಲಾರದಷ್ಟು ಜನರನ್ನು ತಲುಪಿದ ಖ್ಯಾತಿ ಈ ನಾಟಕಕ್ಕಿದೆ. ಈ ನಾಟಕವು ಧುತ್ತರಗಿಯವರ ನಾಟಕಗಳಲ್ಲಿಯೇ ಶಿಖರ ಪ್ರಾಯವೆನಿಸಿದೆ. ಧುತ್ತರಗಿಯವರು ಒಬ್ಬ ವಿಶಿಷ್ಟ ಶೈಲಿಯ ನಾಟಕಕಾರರು ಎಂಬುದಕ್ಕೆ ನಿದರ್ಶನವಾಗಿದೆ.

**ಪಾತ್ರ ಪರಿಚಯ**

1. ವೆಂಕಪ್ಪ – ಕುಲಕರ್ಣಿ ಊರಿನ ಮುಖ್ಯಸ್ಥ
2. ಮರಿಯಪ್ಪ – ಸಾವುಕಾರ, ಲಕ್ಷ್ಮಿಯ ತಂದೆ
3. ಲಕ್ಷ್ಮಿ – ಸಾವುಕಾರ ಮರಿಯಪ್ಪನ ಒಬ್ಬಳೆ ಮಗಳು
4. ಸಿದ್ಧ – ಮರಿಯಪ್ಪನ ಆಳು, ಸಂಗವ್ವನ ಮಗ
5. ಭದ್ರಿ – ಸಂಗವ್ವನ 2ನೇ ಮಗ
6. ಪಾರ್ವತಿ – ಸಿದ್ಧನ ಹೆಂಡತಿ
7. ಸಂಗವ್ವ – ಸಿದ್ಧ ಮತ್ತು ಭದ್ರನ ತಾಯಿ
8. ಗುಂಡಣ್ಣ – ಭದ್ರನ ಸ್ನೇಹಿತ
9. ಭೈರ – ಕೊಲೆಗಡುಕ

ದೇವತಾ ಸ್ತುತಿಯೊಂದಿಗೆ ನಾಟಕ ಆರಂಭವಾಗುತ್ತದೆ.

**ಸಿದ್ಧ:** (ಪದ ಮುಗಿಯುವ ಹೊತ್ತಿಗೆ ಬಂದು) ಪಾರೂ......

**ಪಾರ್ವತಿ:** (ಬಂದು ಕಾಲಿಗೆ ನಮಸ್ಕರಿಸಿ) ಸ್ವಾಮಿ....

ಪಾರ್ವತಿಗೆ ಸಂಕವ್ವನು ಭದ್ರಿಯನ್ನು ಸಣ್ಣದೊಂದು ನವಿರಾದ ಹಾಸ್ಯದೊಂದಿಗೆ ಪರಿಚಯಿಸುತ್ತಾಳೆ. ಅವಿಭಕ್ತ ಕುಟುಂದ ನವಿರಾದ ಭಾವನೆಗಳು ಹಾಗು ಬವಣೆಗಳ ಬುತ್ತಿಯು ಇಲ್ಲಿಂದ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ.

**ಸಿದ್ಧ:** ಮುಗಿದು ಹೋಯಿತು, ಇವನು ಜಾಣನಲ್ಲೆ ಶುದ್ಧ ಕೋಣ ಹೊರಗೆ ಹೋದರೆ ಹೊರಗಿನ ಜನರ ಕೂಡ ಮನೆಯಲ್ಲಿದ್ದರೆ ಸುಮ್ಮನೆ ನಮಗ ಗದ್ಲ ಇವನಿಗೆ ಗೊತ್ತಿರೋದಂದ್ರೆ ನಾಲ್ಕು ಹೊಡಿಯೊದು, ಹೊಡಿಸಿಕೊಳ್ಳೋದು, ಇಲ್ಲ ಬಯ್ಯೋದು ಬಯ್ಯಿಸಿಕೊಳ್ಳೋದು.

**ಭದ್ರ:** ಹೌದು ಅತಿಗೆಮ್ಮಾ.... ನನಗೆ ಗೊತ್ತಿರೋವೂ ನಾಲ್ಕಾದರೆ ನಮ್ಮಣ್ಣನಿಗೆ ಗೊತ್ತಿರೋವೂ ಎರಡೇ ಹೊಡೆಸಿಕೊಳ್ಳೋದು ಇಲ್ಲ ಬಯ್ಯಸಿಕೊಳ್ಳೋದು.

**ಸಂಗವ್ವ:** ಹೌದಪ್ಪಾ ಭದ್ರ ಬಡವರಾಗಿ ಒಮ್ಮೆ ಭೂಮಿ ಮ್ಯಾಲೆ ಹುಟ್ಟಿದ ಬಳಿಕ ಹೊಡಿಸಿಕೊಳ್ಳೋದು, ಬಡಿಸಿಕೊಳ್ಳೋದು ಏನು ಮಹಾಮಾತಾ ನಾವು ಬಡವರಾಗಿ ಹುಟ್ಟೇವಿ.....

**ಭದ್ರಿ:** ಗೊತ್ತವ್ವ ನನಗೆ ಬಡವರಾಗಿ ಹುಟ್ಟೇವಿ ಅನ್ನೋದು. ಆದರೆ ಬಡವರಾಗಿಯೇ ಬದಕ್ತೀವಿ ಅಂತಾ ಆಣೆ ಮಾಡಿವೇನೋ?

ಸಿದ್ದನು ಭದ್ರಿಯ ಬಂಡಾಯವನ್ನು ಸ್ವತಃ ಒಪ್ಪಿಕೊಳ್ಳುವುದಿಲ್ಲ. ಸಿದ್ಧನು ಇಲ್ಲಿ ಶ್ರೀಮಂತಿಕೆ ಹೊಂದಿದವರ ದರ್ಪದ ಮುಂದೆ ಶರಣಾಗತಿಯನ್ನು ಒಪ್ಪಿಕೊಂಡಿದ್ದಾನೆ. ಅವರು ಹೊಡೆದರೂ, ಬೈದರೂ ಸಹ ಸಹಿಸಿಕೊಳ್ಳುವ ಮನೋಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾನೆ. ಆದರೆ ಭದ್ರಿಯು ಇದರ ವಿರುದ್ಧ ದಿಕ್ಕಿನಲ್ಲಿ ಪ್ರತಿರೋಧವನ್ನು ನೀಡುತ್ತಾ ಸಾಗುತ್ತಾನೆ.. ಸಂಗ್ವವಳು ಬಡವರಾಗಿ ಹುಟ್ಟಿದ ಬಳಿಕ ಹೊಡೆಸಿಕೊಂಡು, ಬಯ್ಯಿಸಿಕೊಂಡು ಇರಬೇಕು. ಅದೇ ಬದುಕುವ ರೀತಿ ಎಂಬುದನ್ನು ಆಕೆಯು ಮನಃ ಪೂರ್ವಕವಾಗಿ ಒಪ್ಪಿಕೊಂಡಿದ್ದಾಳೆ. ಕಾರಣ ಉಳ್ಳವರು ಇಲ್ಲದವರ ಮೇಲೆ ದಬ್ಬಾಳಿಕೆ ನಡೆಸಿ ಅದನ್ನು ಒಂದು ಕರ್ತವ್ಯ ಎನ್ನುವಷ್ಟರ ಮಟ್ಟಿಗೆ ಬಡವರ ತಲೆಯಲ್ಲಿ ತುಂಬಿ ಬಿಟ್ಟಿದ್ದಾರೆ.

ಆದರೆ ಭದ್ರಿಯು ವೈಯುಕ್ತಿಕವಾಗಿ ಈ ದೌರ್ಜನ್ಯದ ವಿರುದ್ಧ ಬಂಡಾಯ ಸಾರಲು ಸಿದ್ಧನಾಗಿದ್ದಾನೆ. ಸಾಹುಕಾರ ಮರಿಯಪ್ಪ ತನ್ನ ಅಣ್ಣನಿಗೆ 500 ರೂಪಾಯಿ ಸಾಲ ಕೊಟ್ಟು ಅವರ ಜಮೀನು ಆವರಿಸಿಕೊಂಡು ಅದರಿಂದ ಪ್ರತಿ ವರ್ಷ 5000 ರೂಪಾಯಿ ಗಳಿಸುತ್ತಿರುವುದು ಭದ್ರಿಯ ಗಮನಕ್ಕೆ ಬಂದಿದೆ. ಇಷ್ಟಾಗಿಯೂ ತನ್ನ ಅಣ್ಣ– ತಾಯಿಯು ಸಾಹುಕಾರನ ಮನೆಯಲ್ಲಿ ಜೀತದಾಳಾಗಿ ದುಡಿಯುತ್ತಿರುವುದನ್ನು ವಿರೋಧಿಸುವಲ್ಲಿ ಭದ್ರಿಯಲ್ಲಿ ಮಾರ್ಕ್ಸ್‌ವಾದಿ ಚಿಂತನೆಗಳು ಜಾಗೃತವಾಗಿರುವುದು ನಮಗೆ ಗೋಚರವಾಗುತ್ತದೆ. ನಂತರ ಸಿದ್ದ ಭದ್ರಿಯನ್ನು **'ಏ ಸಾಕಾ ಸುಮ್ಮನಿರೋ ಶೂರ ಸರದಾರ ಸಂಗೊಳ್ಳಿ ರಾಯಣ್ಣ ಆಗಿದ್ದಾನೆ'** ಎಂದು ವ್ಯಂಗ್ಯ ಮಾಡುತ್ತಾನೆ.

ಸ್ವತಂತ್ರ ಪೂರ್ವದಲ್ಲಿ ವಸಾಹತುಶಾಹಿ ಪ್ರಭುತ್ವದ ವಿರುದ್ಧ ಧ್ವನಿಯೆತ್ತಿದ ರಾಯಣ್ಣ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿದ್ದ. ಸ್ವಾತಂತ್ರ್ಯದ ನಂತರ ಬಂಡವಾಳಶಾಹಿಗಳಿಂದ ಉಂಟಾದ ವರ್ಗ ಸಂಘರ್ಷದ ವಿರುದ್ಧ ಧ್ವನಿಯೆತ್ತುವ ಶಕ್ತಿಯಾಗಿ ಭದ್ರಿಯು ಇಲ್ಲಿ ಕಾಣಿಸಿಕೊಳ್ಳುತ್ತಾನೆ. ಕೊನೆಯವರೆಗೂ ಸಾಹುಕಾರ ಮರಿಯಪ್ಪನಿಗೆ ಸಿಂಹಸ್ವಪ್ನವಾಗಿ ಕಾಡುತ್ತಾನೆ. ಇದರ ನಡುವೆ ಸಂಗವ್ವ ಪಾರ್ವತಿಗೆ ಭದ್ರಿಯನ್ನು ನಿನ್ನ ಮಗನಂತೆ ಸಾಕಿ ಸಲುಹಬೇಕು ಎಂದು ಕೇಳಿಕೊಳ್ಳುತ್ತಾಳೆ. ಆಕೆಯು ಒಪ್ಪಿಕೊಂಡು ಕೊಟ್ಟ ಮಾತನ್ನು ಕೊನೆಯವರೆವಿಗೂ ಉಳಿಸಿಕೊಳ್ಳುತ್ತಾಳೆ. ಅದು ಮುಂದಿನ ಸನ್ನಿವೇಶಗಳಲ್ಲಿ ತಿಳಿಯುತ್ತದೆ. ಈ ಅಂಶವು ಅಂದಿನ ಸಮಾಜಕ್ಕೆ ಸಂಬಂಧಗಳನ್ನು ನಿಭಾಯಿಸುವಾಗ ಅಳವಡಿಸಿಕೊಳ್ಳಬೇಕಾದ ಮೌಲ್ಯಗಳನ್ನು ಸಹೃದಯ ಬಂಧುಗಳಲ್ಲಿ ಜಾಗೃತಗೊಳಿಸುತ್ತದೆ. ಆಧುನಿಕತೆಯತ್ತ ಸಾಗುತ್ತಿರುವ ನಾವು ಇಂದು ಸಂಬಂಧಗಳನ್ನು ಉಳಿಸಿಕೊಳ್ಳುವ ಮತ್ತು ಬೆಳೆಸಿಕೊಂಡು ಹೋಗುವ ವಿಚಾರಗಳಲ್ಲಿ ಅಧೋಗತಿಗೆ ಇಳಿಯುತ್ತಾ ಇರುವ ಸಂದರ್ಭದಲ್ಲಿ ಭದ್ರಿ ಮತ್ತು ಪಾರ್ವತಿಯ ಸಂಬಂಧ ನಮ್ಮಲ್ಲಿ ಮೌಲ್ಯವನ್ನು ಜಾಗೃತಗೊಳಿಸುವಲ್ಲಿ ಸಂದೇಹವಿಲ್ಲ. ಪಾರ್ವತಿಯು ನಾಟಕದುದ್ದಕ್ಕೂ ಸ್ವಲ್ಪ ಬಂಡಾಯದ ನೆರಳು ತನ್ನ ಮೇಲೆ ಸೋಕಿರುವ ಹಾಗೆಯೇ ವರ್ತಿಸುವುದುಂಟು ಆದ್ದರಿಂದಲೇ ಆಕೆಯು ಭದ್ರಿಯ ಪರವಾಗಿಯೇ ಕೊನೆಯವರೆಗೂ ನಿಲ್ಲುತ್ತಾಳೆ. ಜಗತ್ತಿನಾದ್ಯಂತ ಒಂದು ಸಾಮಾಜಿಕ ಪಿಡುಗಾಗಿರುವಂತಹ ಲಂಚಗುಳಿತನದ ಬಗ್ಗೆ ಧುತ್ತರಗಿಯವರು 7ನೇಯ ಪ್ರವೇಶದಲ್ಲಿ ತಿಳಿಸುತ್ತಾರೆ. ಲಂಚಗುಳಿತನ ಸಾರ್ವಕಾಲಿಕವಾಗಿ ಬೆಳೆಯುತ್ತಾ ಬಂದಿರುವುದರಿಂದ ಇಂದು ಜಗತ್ತಿನಾದ್ಯಂತ [2]ಭಾರತವು ಭ್ರಷ್ಟಾಚಾರದಲ್ಲಿ **86**ನೇ ಸ್ಥಾನ ಪಡೆದುಕೊಂಡಿದೆ.

**ವೆಂಕಪ್ಪ:** ಈ ಕಾಂಗ್ರೆಸ್ ಸರಕಾರ ಬಂದು ನಮ್ಮದು ಕುಲಕರ್ಣಿ ಕಾಳೆದು ತಾಲಾದೀನ ತಂದು ಬಾಯಿ ಮೇಲೆ ಬಂಡೆಗಲ್ಲು ಹೇರಿಬಿಟ್ಟಿತು. ಈ ನಾಟಕ ರಚನೆಯ ಕಾಲ ಘಟ್ಟಕ್ಕೆ ಪ್ರಜಾಪ್ರಭುತ್ವ ಸರ್ಕಾರ ತಂದ ಕೆಲವು ಕಾನೂನುಗಳು ಸಿರಿವಂತರ ದರ್ಪಕ್ಕೆ ಸ್ವಲ್ಪ ಮಟ್ಟಿಗಾದರೂ ತಣ್ಣೀರೆರಚಿತು ಎಂಬುದನ್ನು ನಾಟಕಕಾರರು ಸೂಚ್ಯವಾಗಿ ತಿಳಿಸಿದ್ದಾರೆ. ಲಕ್ಷ್ಮಿ ಮತ್ತು ಬದ್ರಿಗೆ ಜಗಳವಾಗಿರುತ್ತದೆ. ಆ ಸಂದರ್ಭದಲ್ಲಿ;

**ಲಕ್ಷ್ಮಿ:** ಸಿಟ್ಟು ಯಾತರ ಸಿಟ್ಟು ಕಾಕಾ ಬಡವನ ಸಿಟ್ಟು ದವಡೆಗೆ ಮೂಲ ಅಂತ, ನನ್ನ ಜಡಿ ಹಿಡಿದು ಜಗ್ಗಿ ದಿವಸನ ಎದಿ ಹಿಡಿದು ಕಾಯಿ ಓಡಿತಿದ್ದ ನಮ್ಮಪ್ಪ ಪಾಪ ಸಂಗವ್ವತ್ತಿ ಮುಖ ನೋಡಿ ಬಿಟ್ಟ. ಇಲ್ಲಿ ಬಡವರು ಧನಿಕರ ವಿರುದ್ಧ ಧ್ವನಿ ಎತ್ತಲೇ ಬಾರದು ಎನ್ನುವ ಧೋರಣೆಯ ಅಂದಿನ ಸಮಾಜದ ಸಿರಿವಂತರ ಅಭಿಪ್ರಾಯವಾಗಿತ್ತು. ಲಕ್ಷ್ಮಿ ಆ ನೆಲೆಯಲ್ಲಿಯೇ ಮೇಲಿನಂತೆ ನುಡಿಯುತ್ತಾಳೆ. ಸ್ವತ್ರಂತ್ರದ ನಂತರ [3]ಸಂವಿಧಾನದ 19–22ನೇ ವಿಧಿಗಳು ಸ್ವಾತಂತ್ರ್ಯದ ಹಕ್ಕುವಿನ ಬಗ್ಗೆ ತಿಳಿಸುತ್ತದೆ. ಆದರೆ ಮೇಲಿನ ಸನ್ನಿವೇಶದಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಹರಣವಾಗಿರುವುದನ್ನು ನಾಟಕಕಾರರು ಸೂಚಿಸಿದ್ದಾರೆ. ಭದ್ರಿಯು ವ್ಯಕ್ತಿ ಸ್ವಾತಂತ್ರ್ಯಗಿಟ್ಟಿಸಿಕೊಳ್ಳುವ ದಿಕ್ಕಿನಲ್ಲಿ ಸಾಗುತ್ತಾನೆ. ಅಲ್ಲಿಗೆ ವೆಂಕಪ್ಪ–ಮರಿಯಪ್ಪನ ಆಗಮನವಾಗುತ್ತದೆ. ಆಗ ಭದ್ರಿಯು ವೆಂಕಪ್ಪನನ್ನು

**ಭದ್ರಿ:** ಭದ್ರಿ ಇನ್ನು ಮೇಲೆ ಸಾಹುಕಾರ ಮಂದಿ ಬಡವರ ಹೊಲಾನ ಬಡ್ಡಿಯನ್ನು ಬರಲಾರದಂಗ ಸರಕಾರದವರು ಕಾಯಿದೇವೋ ಮಾಡ್ಯಾರ ಮರಿಯಪ್ಪಗ, ನಿಮ್ಮ ಹೊಲ ನೀವು ಉಣ್ಣಿರಿ ಅಂತ ಹೇಳಿದರಲ್ರಿ, ಎನ್ನುತ್ತಾನೆ.

ಇಲ್ಲಿ ನಾಟಕಕಾರರು ಭದ್ರಿಯ ಮೂಲಕ ಅಂದಿನ ಜನತೆಯಲ್ಲಿ ಕಾನೂನಿನ ಅರಿವು ಮೂಡಿಸಲು ಹೊರಟಿದ್ದಾರೆ. ಆ ಕಾಲ ಘಟ್ಟಕ್ಕೆ ಊರ ಗೌಡರು, ಜಮೀನ್ದಾರರು, ಪಟೇಲರನ್ನು ಮೀರಿ ಅನಕ್ಷರಸ್ಥ ಬಡವ ಮಂದಿಗೆ ಸರಕಾರದ ಇಂತಹ ಕಾನೂನಿನ ವಿಚಾರಧಾರೆಗಳು ತಲುಪಲು ಸಾಧ್ಯವಿರಲಿಲ್ಲ. ಆ ಕೆಲಸವನ್ನು ನಾಟಕಕಾರರು ನಾಟಕದ ಮೂಲಕ ಜನತೆಗೆ ತಿಳಿಸಲು ಮುಂದಾಗಿದ್ದಾರೆ.

ಲಕ್ಷ್ಮಿಯು ಸಿರಿವಂತಿಕೆಯ ದರ್ಪದ ಕುಡಿಯಾಗಿ ನೀರು ತರುವ ಪ್ರಸಂಗದಲ್ಲಿ ಕಂಡುಬರುತ್ತಾಳೆ. ವರ್ಗ ಸಂಘರ್ಷದಲ್ಲಿ ಶೋಷಣೆ ಮಾಡುವ ಪ್ರತಿನಿಧಿಯಾಗಿ ಲಕ್ಷ್ಮಿಯ ಪಾತ್ರ ಕಂಡುಬರುತ್ತದೆ. ಸಿರಿವಂತರ ದರ್ಪದ ದರ್ಬಾರಿನೊಳಗೆ ಬಡವರ ಹಸಿವು, ಶ್ರಮ, ದಣಿವುಗಳಿಗೆ ಬೆಲೆ ಇಲ್ಲ ಎಂಬುದು ಸವತೆಕಾಯಿ ತಿನ್ನುವ ಪ್ರಸಂಗದಲ್ಲಿ ವ್ಯಕ್ತವಾಗುತ್ತದೆ. ಉಳ್ಳವರ ನೆರಳಿನಲ್ಲಿ ಬಡವರು ಅಸ್ತಿತ್ವಕ್ಕಾಗಿ ಪರದಾಡಬೇಕಿದೆ. ಈ ಸಿರಿವಂತರ ದರ್ಪ ಮುಂದುವರೆದು ಹೆಣ್ಣು ಮಕ್ಕಳ ಶೋಷಣೆ ಎಡೆಯಿಕ್ಕಿರುವುದನ್ನು ಗಮನಿಸಬಹುದು.

ಸಾಹುಕಾರ ಮರಿಯಪ್ಪನು ಪಾರ್ವತಿಯ ಮೇಲೆ ಅತ್ಯಾಚಾರವೆಸಗಲು ಮುಂದಾಗುತ್ತಾನೆ. ಈ ಸಮಸ್ಯೆಯು ಹಿಂದಿನ ಮತ್ತು ಇವತ್ತಿನ ಬಹುದೊಡ್ಡ ಸಮಸ್ಯೆಯಾಗಿದೆ. ಅಂದಿನಿಂದ ಇಂದಿನವರೆಗೂ ಹೆಣ್ಣು ಮಕ್ಕಳ ಮೇಲೆ ನಡೆದಿರುವ ನಡೆಯುತ್ತಿರುವ ದೌರ್ಜನ್ಯಗಳು ಹಲವಾರು. ಅದರಲ್ಲೂ ಈ ಅತ್ಯಾಚಾರ ಮನುಷ್ಯನ ಕ್ರೂರತನಕ್ಕೆ ಹಿಡಿದ ಕನ್ನಡಿಯಂತಿದೆ. ಮೊನ್ನೆ ಮೊನ್ನೆಯು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ನಮ್ಮ ಸಮಾಜದ ಭಯಬೀತ ಮುಖದ ದರ್ಶನ ಮಾಡಿಸುತ್ತದೆ. ಇಂತಹ ನೂರಾರು ಪ್ರಕರಣಗಳು ದೇಶದಾದ್ಯಂತ ನಡೆಯುತ್ತಿವೆ. ಈ ಸಮಸ್ಯೆಯು ಸಮಾಜದ ಸರ್ವಕಾಲಿಕ ಸಮಸ್ಯೆಯಾಗಿದೆ. ಪ್ರಸ್ತುತ [4]ಭಾರತದಲ್ಲಿ ದಾಖಲಾದ ಒಟ್ಟು ಅತ್ಯಾಚಾರದ ಪ್ರಕರಣಗಳು **3,20,33.** ಇದರಲ್ಲಿ ವಯಸ್ಕ (18ವರ್ಷ ಮೇಲ್ಪಟ್ಟವರು**) 27,093** ಅಪ್ರಾಪ್ತ (10 ವರ್ಷಕ್ಕಿಂತ ಕಡಿಮೆ) **4,940.** ಪಾರ್ವತಿಯನ್ನು ಮರಿಯಪ್ಪನಿಂದ ಭದ್ರಿಯು ಕಾಪಾಡಲು ಬರುತ್ತಾನೆ. ಮರಿಯಪ್ಪನನ್ನು ಬಡಿಯುವ ಸಂದರ್ಭದಲ್ಲಿ

**ಭದ್ರಿ:** ಮರಿಯಪ್ಪ ನಿನ್ನ ಸುಳ್ಳು ಸಾಲದಲ್ಲಿ ಬಡ್ಡಿ ಭಾರಕ್ಕೆ ಬೆನ್ನು ಬಾಗಿ ಮೊದಲೇ ಬಡವರಾದ ನಾವು ಮತ್ತಷ್ಟು ಬಡತನದ ಕಡು ತಾಪದಲ್ಲಿ ಒಡಲಿಗನ್ನ ಸಿಗದೆ ಹಸಿವಿನ ತಾಪ ಆವರಿಸಿ ನಿಂತಿದೆ. ಸಿರಿ ಬಡತನಗಳ ನಡುವೆ ಹೊತ್ತಿದ ವೈರದ ಉರಿ ಧಗಧಗಿಸ ತೊಡಗಿದೆ. ನಿನಗೆ ನಾ ಕೊಡುವ ಕಟ್ಟಕಡೆಯ ಭಾಷೆ ಇದು. ನಮ್ಮಂಥ ಬಡವರನ್ನು ಬೆದರಿಸಿ ದನಗಳಂತೆ ದುಡಿಸಿ ಗಳಿಸಿದ ನಿನ್ನ ಸಂಪತ್ತಿಗೆ ಸವಾಲು ಹಾಕಲಿರುವ ನನ್ನಿಂದ ಸಿಡಿದ ರೋಷದ ಸಿಡಿಲು ನಿನ್ನ ಮುಖಕ್ಕೆ ಬಡಿದು ಮುಂದಿನ ಮೂರು ಹಲ್ಲು ನಡುಗಿಸಿತು. ಆದರೂ ಈ ಸಿಡಿಲು ಇನ್ನೂ ಮೋಗ್ಗಿನಲ್ಲಿದೆ. ಮುಂದೆ ಹೂವಾಗಿ ಅರಳಿ, ಕಾಯಾಗಿ ಬೆಳೆದು ಹಣ್ಣಾಗಿ ಕಳಿತಾದ ತಿಳಿಯುವುದು ಅದರ ರುಚಿ ಬಡವರನ್ನು ಮುಗಿಸಿದ ಪಾಪ ಅಪ್ಪುವುದು ನಿನ್ನ ಬಾಚಿ.............

ಶ್ರೀಮಂತರ ಅಟ್ಟಹಾಸ, ಬಡವರ ರೋಧನೆ ತೌಲನಿಕವಾಗಿ ವಿವರಿಸಲ್ಪಟ್ಟಿದೆ. ಆರ್ಥಿಕ ಸಬಲತೆಯಿಂದ ಸೊಕ್ಕಿದ ಶ್ರೀಮಂತರು ಬಡವರ ಪ್ರಾಣ–ಮಾನಕ್ಕೆ ಬೆಲೆ ಇಲ್ಲದಂತೆ ಪ್ರಾಣಿಗಳಿಗಿಂತಲೂ ಕೀಳಾಗಿ ತಮಗೆ ಬೇಕಾದ ರೀತಿಯಲ್ಲಿ ಶೋಷಣೆ ಮಾಡುತ್ತಾರೆ. ಇಲ್ಲಿ ಭದ್ರ ಸಂಪತ್ತಿನ ವಿಕೇಂದ್ರೀಕರಣವನ್ನು

ಬಯಸಿ ಹೋರಾಟಕ್ಕಿಳಿದ ಪ್ರತಿನಿಧಿಯಾಗಿದ್ದಾನೆ. "ಭದ್ರ ವ್ಯಕ್ತಿಗತ ನೆಲೆಯಲ್ಲಿ ಹೋರಾಡುವ ಬದಲು ಅದನ್ನು ಸಮುದಾಯದ ಹೋರಾಟವಾಗಿ ಪರಿವರ್ತಿಸಬೇಕು" ಎಂಬ ಅಭಿಪ್ರಾಯವನ್ನು ಹೊಂದಿದ್ದಾನೆ.

4ನೇಯ ಪ್ರವೇಶದಲ್ಲಿ ಸಿದ್ದನು ಜ್ವರ ಬಂದು ಮಲಗಿದ್ದಾನೆ. ಆತ ಕೆಲಸಕ್ಕೆ ಹೋಗಿಲ್ಲ. ವಾರದ ಕೋಲಿನೇ ಸಾಹುಕಾರ ಕಟ್ಟು ಮಾಡಿದ್ದಾನೆ.

**ಪಾರ್ವತಿ:** ಇದಕ್ಕಿಲ್ಲಿ ದುಃಖ ಪಡಬಾರದು, ಪ್ರಪಂಚದಲ್ಲಿ ಬಡತನ ನಮ್ಮೊಬ್ಬರಿಗೆ ಇದೆ ಏನೋ. ನಮ್ಮಂತೆ ಸಾವಿರಾರು ಜನ ಉಪವಾಸ ವನವಾಸ ಅನುಭವಿಸುತ್ತಾ ಇಲ್ಲವೇನೋ. ಅನ್ನ ಇರದಿದ್ರೇನಾಯಿತು, ನೀರಿದೆಯಲ್ಲ ಕುಡಿದು ಮಲಗಲಿಕ್ಕೆ ಎಂದು ಪಾರ್ವತಿಯು ಸಿದ್ದನನ್ನು ಸಮಾಧಾನ ಪಡಿಸುತ್ತಾಳೆ.

ಈ ಮೇಲಿನ ಸನ್ನಿವೇಶದಲ್ಲಿ ಬಡತನದ ಚಿತ್ರಣದ ತೀವ್ರತೆಯ ಪರಿ ತಿಳಿಯುತ್ತದೆ ಸ್ವಾತಂತ್ರ್ಯ ಭಾರತದ ಈ ಸಮಸ್ಯೆಗೆ ನಾವು 2 ಪ್ರಮುಖ ಕಾರಣಗಳನ್ನು ಗುರುತಿಸಬಹುದು.

**1. ಸಂಪ್ಪತ್ತಿನ ಸೋರಿಕೆ**

**"ಪಾವರ್ಟಿ ಅಂಡ್ ಅನ್ ಬ್ರಿಟೀಷ್ ರೂಲ್ ಇನ್ ಇಂಡಿಯ"** ಎಂಬ ಪುಸ್ತಕದಲ್ಲಿ ಸಂಪತ್ತಿನ ಸೋರಿಕೆಯಿಂದಾಗಿ ಭಾರತೀಯ ಆರ್ಥಿಕತೆಯ ಮೇಲೆ ಉಂಟಾದ ಪರಿಣಾಮವನ್ನು ದಾದಬಾಯಿ ನವರೋಜಿ ಅವರು ತಿಳಿಸಿ ಕೊಟ್ಟಿದ್ದಾರೆ.

- ಇದು ಭಾರತೀಯ ಸಮಾಜದ ಎಲ್ಲ ವರ್ಗದವರನ್ನು ಬಡವರನ್ನಾಗಿ ಮಾಡಿತು.
- ಭಾರತವನ್ನು ತನ್ನ ಅಮೂಲ್ಯ ಬಂಡವಾಳದಿಂದ ಬರಿದು ಮಾಡಿತು.
- ವರ್ಷಕ್ಕೆ 30–40 ಮಿಲಿಯನ್ ಪೌಂಡ್ ಸ್ಟರ್ಲಿಂಗ್ ಮೊತ್ತದಷ್ಟು ಸಂಪತ್ತು ಪ್ರತಿ ವರ್ಷವೂ ಭಾರತೀಯರಿಂದ ಇಂಗ್ಲೆಂಡಿಗೆ ಹರಿಯುತ್ತಿತ್ತು ಎಂದು ದಾದಾಬಾಯಿ ನವರೋಜಿಯವರು ಅಂದಾಜಿಸಿದ್ದಾರೆ. ಭಾರತದ ಬಡತನಕ್ಕೆ ಇದು ಮುಖ್ಯ ಕಾರಣವೆಂದು ಅವರು ವಿವರಿಸಿದ್ದಾರೆ.

**2. ಸಂಪತ್ತಿನ ಕೇಂದ್ರೀಕರಣ**

ಸ್ವಾತಂತ್ರ್ಯದ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಉಂಟಾದ ಆರ್ಥಿಕ ಸ್ಥಿತ್ಯಂತರಗಳಿಂದ ಬಡವರ ಪಾಲಿಗೆ ಸಾಲವೆಂಬುದು ಅನಿವಾರ್ಯವಾಗಿತ್ತು. ಬಡವರಿಗೆ ಸಾಲ ನೀಡುವ ಹೆಸರಿನಲ್ಲಿ ಧನಿಕರು ಬಡವರ ಮನೆ–ಹೊಲಗಳನ್ನು ಲಪಟಾಯಿಸುವಂತಹ ಸಂಚು ರೂಪಿಸುತ್ತಿದ್ದರು. ಸಾಲಕ್ಕೆ ಬಡ್ಡಿ–ಚಕ್ರಬಡ್ಡಿ ಹಾಕಿ ಸಾಯುವ ತನಕ ಜೀತದಾಳುಗಳಾಗಿ ಬಡವರು ದುಡಿಯಬೇಕಿತ್ತು. ಇದರಿಂದ ಧನಿಗಳಿಗೆ ತಾವು ನೀಡಿದ ಹಣದ ಮೂರು ಪಟ್ಟು ಹಣ ಅವರ ಬೊಕ್ಕಸಕ್ಕೆ ಸೇರುತ್ತಿತ್ತು. ಇಂತಹ ಇನ್ನೂ ಹಲವು ಮಾರ್ಗಗಳಿಂದ ಸಂಪತ್ತಿನ ಕೇಂದ್ರೀಕರಣವಾಗಿ ಬಡತನ ಅಂದಿನ ಸಮಾಜದಲ್ಲಿ ಬೇರೂರಿತ್ತು.

ಈ ನಾಟಕದಲ್ಲಿ ಭದ್ರಿಯ ತಂದೆ, ತಾಯಿ, ಮತ್ತು ಅಣ್ಣನು ಇಂಥದ್ದೇ ಸ್ಥಿತಿಯಲ್ಲಿ ಸಿಲುಕಿದ್ದಾರೆ. ಭದ್ರಾ ಈ ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತಾನೆ ಆದರೆ ಆ ಧ್ವನಿಯನ್ನು ಮುಚ್ಚಿಹಾಕಲು ಅಣ್ಣ ಮತ್ತು ತಾಯಿಯೇ ಪ್ರಯತ್ನಿಸುತ್ತಾರೆ. ಸಾಹುಕಾರನ ಸಂಪತ್ತಿನ ದರ್ಪಕ್ಕೆ ಅವರು ಒಳಗಾಗಿದ್ದಾರೆ.

ನಂತರ ಮರಿಯಪ್ಪ, ವೆಂಕ್ಕಪ್ಪ, ಲಕ್ಷ್ಮಿ ಈ ಮೂವರು ಸೇರಿ 'ಭದ್ರಿಯು ಲಕ್ಷ್ಮಿಯನ್ನು ಅತ್ಯಾಚಾರವೆಸಗಲು ಪ್ರಯತ್ನಿಸಿದ ಎಂಬ ಅಪವಾದವನ್ನು ಭದ್ರನ ಮೇಲೆ ಹೊರಿಸುತ್ತಾರೆ'. ಸಿರಿವಂತರು ಬಡವರನ್ನು ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ತುಳಿಯುವುದಲ್ಲದೆ, ಮಾನಸಿಕವಾಗಿಯೂ ಅವರನ್ನು ಕುಗ್ಗಿಸಿ ತಮ್ಮ ಬೇಳೆಕಾಳು ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಈ ಆರೋಪದ ಹಿನ್ನೆಲೆಯಲ್ಲಿ ಸಿದ್ಧ ಮತ್ತು ಭದ್ರಿಯ ನಡುವೆ ಮಾತಿನ ಚಕಮಕಿ ನಡೆಯುತ್ತದೆ.

**ಪಾರ್ವತಿಯ ಬಳಿ ಭದ್ರಿಯು**: ಸುಳ್ಳು ಅಪವಾದ ಹೊರಿಸಿ ಅಪರಾಧಿಯನ್ನಾಗಿಸಿದ ಅವಳು ನನ್ನ ಪಾದಕ್ಕೆ ಬಂದು ಕಣ್ಣು ಹಚ್ಚಿ ತನ್ನ ಹೆಣ್ತನವನ್ನು ನನಗರ್ಪಿಸಬೇಕು. ಅವರಪ್ಪನ ಸಂಪತ್ತನ್ನೆಲ್ಲ ನಾನು ಬಡವರಿಗೆ ಹಂಚಬೇಕು ಅತ್ತಿಗೆ..... ಈ ಭದ್ರಿಗೆ ಹಾಲು ಕುಡಿಸಿ ತಾಯಿತನ ಪಡೆದ ನಿನ್ನ ಮೇಲೆ ಪಾಪದೃಷ್ಟಿ ಹರಿಸಿದ ಆ ಮರಿಯಪ್ಪನ ಸಂಪತ್ತಿಗೆ ಇದೇ ಭದ್ರ ಹಾಕುವ ಸವಾಲು (ಕೊಡ್ಲಿ ತೆಗೆದುಕೊಂಡು) ಅತ್ತಿಗೆ ಇಂದಿನಿಂದ ನಮ್ಮೂರಲ್ಲಿ ಮರಣದ ಮಹಾನವಮಿಯೇ ಪ್ರಾರಂಭ. "ಸವಾಲು ಸವಾಲು ಸಂಪತ್ತಿಗೆ ಸವಾಲು."

ಹೀಗೆ ಸಿರಿವಂತನ ಸಂಪತ್ತಿಗೆ ಸವಾಲು ಒಡ್ಡಿದ ಹಳ್ಳಿಯ ಧೀರೋದಾತ್ತ ಬಡವರ ಯುವಕ ತನ್ನ ಛಲ ಹಾಗೂ ಪ್ರಾಮಾಣಿಕತೆಯಿಂದ ಧನಿಕನ ದರ್ಪ ಅಡಗಿಸುವಲ್ಲಿ ಯಶಸ್ವಿಯಾಗುತ್ತಾನೆ. ಹರಿತವಾದ ದೇಶಿ ಸತ್ವ ತುಂಬಿದ ಸಂಭಾಷಣೆ, ರೋಚಕವಾದ ಘಟನೆಗಳಿಂದ ನಾಟಕ ರಮ್ಯವೆನಿಸಿದೆ. ಇಲ್ಲಿ ಭದ್ರ ಬಡವರ ಒಬ್ಬ ಪ್ರತಿನಿಧಿಯಾಗಿರುವುದರಿಂದ ಅವನು ಮಾಡುವ ಹೋರಾಟದಲ್ಲಿ ಸಾಮೂಹಿಕ ಧ್ವನಿಯೂ ಅಡಗಿರುವುದನ್ನು ಗುರುತಿಸಬಹುದು.

ಭದ್ರಿಯ ಈ ಸಂಕಲ್ಪ ತಿಳಿದು ವೆಂಕಪ್ಪ–ಮರಿಯಪ್ಪ ಇಬ್ಬರು ಸೇರಿ ಭದ್ರಿಯನ್ನು ಜೈಲಿಗೆ ಕಳುಹಿಸಲು ಒಂದು ಸಂಚನ್ನು ರೂಪಿಸುತ್ತಾರೆ. ಅದೇನೆಂದರೆ ಹುಲ್ಲು ಮೆದೆಗಳಿಗೆ ಭದ್ರಿ ಬೆಂಕಿ ಹಚ್ಚಿದ್ದಾನೆ ಎಂದು. ಇದಕ್ಕೆ ಸುಳ್ಳು ಸಾಕ್ಷಿ ಹೇಳಲು ಮರಿಯಪ್ಪ ತಾನು ಸಾಲ ನೀಡಿದ ಬಡ ರೈತರನ್ನು ಬಳಸಿಕೊಳ್ಳುತ್ತಾನೆ. ಆರ್ಥಿಕ ಅಸಮಾನತೆ ಕೂಡಿದ ಸಮಾಜದಲ್ಲಿ ಉಳ್ಳವರು ಇಲ್ಲದವರನ್ನು ತಮ್ಮ ಸ್ವಾರ್ಥಕ್ಕಾಗಿ ಯಾವ ರೀತಿಯಾದರೂ ಬಳಸಿಕೊಳ್ಳುತ್ತಿದ್ದರು ಎಂಬುದಕ್ಕೆ ಈ ಪ್ರಸಂಗ ಸಾಕ್ಷಿಯಾಗಿದೆ. ಈ ವಿಷಯ ತಿಳಿದ ಲಕ್ಷ್ಮಿಯು ಭದ್ರ ಇರುವಲ್ಲಿಗೆ ಬರುತ್ತಾಳೆ ಹಾಗೂ ಅವನ ಮೇಲೆ ತನಗೆ ಪ್ರೀತಿ ಹುಟ್ಟಿರುವ ವಿಚಾರವನ್ನು ತಿಳಿಸುತ್ತಾಳೆ. ಅವಳ ಪ್ರೀತಿಯನ್ನು ಒಪ್ಪಿಕೊಂಡ ಭದ್ರ ಅವಳ ಜೊತೆ ತಾನು ನಡೆದುಕೊಂಡ ಅಸಭ್ಯತನಕ್ಕೆ ಕ್ಷಮೆಯನ್ನು ಯಾಚಿಸುತ್ತಾನೆ. ಆಗ ಅವನು ನುಡಿದ ಮಾತುಗಳಲ್ಲಿ ಹೆಣ್ಣಿಗೆ ಗೌರವವನ್ನು ನೀಡುವವನೆ ಉತ್ತಮ ಪುರುಷ ಹಾಗೂ ಧೀರೋದಾತ್ತ ಎನ್ನುವ ಸಂದೇಶವನ್ನು ನೀಡುತ್ತಾನೆ.

ಇತ್ತ ವೆಂಕಪ್ಪ ಮತ್ತು ಮರಿಯಪ್ಪ ಭದ್ರನನ್ನು ಹುಡುಕಿ ಸಿಗದಿದ್ದಾಗ ಪೊಲೀಸರನ್ನು ಚೀಟಿ ಬರೆದು ಕರೆಯಿಸಬೇಕು ಎನ್ನುವ ಸಂದರ್ಭದಲ್ಲಿ

**ವೆಂಕಪ್ಪ: ಅಂದ್ರೇನು ಕುಲಕರ್ಣಿ ಚೀಟಿ ಅಂದ್ರೆ ಅದೇನೋ ಖಾದಿ ಕೇಂದ್ರದೊಳಗೆ ನೂಲುವ ರಾಟೆಯಂತ್ ಮಾಡಿಯೇನು ಚೀಟಿ ಕೊಟ್ಟು ಪ್ರಸಂಗ ಬಂದರೆ ಪಾರ್ಲಿಮೆಂಟ್ ಆಳುವ ಪ್ರೆಸಿಡೆಂಟ್ ರನ್ನೆ ಇಲ್ಲಿಗೆ ಕರೆಸುವವವರು.**

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸ್ವದೇಶಿ ಚಳುವಳಿಯು ಪ್ರಮುಖ ಪಾತ್ರವನ್ನು ವಹಿಸಿದೆ. ಸ್ವದೇಶಿ ವಸ್ತುಗಳ ಬಳಕೆಯು ದೇಶದ ಆರ್ಥಿಕತೆಯನ್ನು ಬಲಪಡಿಸುತ್ತದೆ ಎಂಬ ಗಾಂಧೀಜಿಯವರ ದೂರದೃಷ್ಟಿಯು ಒಪ್ಪಿತವಾಗುವಂತದ್ದೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಜನರಿಗೆ ಖಾದಿಯ ಬಟ್ಟೆಗಳ ಬಗ್ಗೆ ಅಥವಾ ಸ್ವದೇಶಿ ವಸ್ತುಗಳ ಬಗೆಗೆ ಅಭಿಮಾನ ಕಡಿಮೆಯಾಗಿರುವ ವಿಷಯವನ್ನು ಸೂಚ್ಯವಾಗಿ ಹೇಳಲು ನಾಟಕಗಳಲ್ಲಿ ಹೊರಟಿದ್ದಾರೆ ಎನಿಸುತ್ತದೆ.

ಭದ್ರ ತನ್ನ ಅತ್ತಿಗೆಯನ್ನು ಕಾಣಲು ಮನೆಗೆ ಬರುವ ಸಂದರ್ಭದಲ್ಲಿ ಪೊಲೀಸರು ಬರುವ ಸೂಚನೆಯು ತಿಳಿದ ಪಾರ್ವತಿಯು ಬದ್ರಿಯನ್ನು ಹಿತ್ತಲಿನಲ್ಲಿ ಬಚ್ಚಿಡುತ್ತಾರೆ. ಆಗ ಪೌಜುದಾರನು ಪಾರ್ವತಿಗೆ ಭದ್ರಿ ಇರುವ ಸ್ಥಳ ಹೇಳಲು ಒತ್ತಾಯಿಸುತ್ತಾನೆ. ಆಕೆಯು ಹೇಳಲು ನಿರಾಕರಿಸಿದಾಗ ಗರ್ಭವತಿಯಾದ ಪಾರ್ವತಿಯ ಮೇಲೆ ನಡೆಸುವ ದೌರ್ಜನ್ಯವು ಕ್ರೂರವಾದದ್ದು ಮತ್ತು ಸಮಾಜವೇ ನಾಚಿಕೆ ಪಡುವಂಥದ್ದು. ಈ ಸಂದರ್ಭದಲ್ಲಿ ಹೊರಬಂದು ಭದ್ರ ಮಾತನಾಡುವಾಗ ಹೆಣ್ಣು ಮಕ್ಕಳ ದೌರ್ಜನ್ಯದ ವಿರುದ್ಧ ಹೋರಾಡುವ ನ್ಯಾಯವಾದಿಯಂತೆ ಕಾಣಿಸಿಕೊಳ್ಳುತ್ತಾನೆ. ನಂತರ ಪೊಲೀಸರು ಭದ್ರಿಯನ್ನು ಬಂಧಿಸುವಾಗ ಅವನು ಆಡುವ ಮಾತುಗಳು ಕ್ರಾಂತಿಯ ಕಿಡಿಗಳಂತೆ ಝಳಪಿಸುತ್ತವೆ. ಈ ಕೆಟ್ಟ ಸನ್ನಿವೇಶಗಳನ್ನು ನೋಡಿದ ಸಂಗವ್ವನು ಮರಣ ಹೊಂದುತ್ತಾಳೆ. ಇದನ್ನು ನೋಡಿದ ಊರಿನ ಜನಗಳು ಸಾಹುಕಾರನ ವಿರುದ್ಧ ತಿರುಗಿ ಬೀಳುತ್ತಾರೆ. ಇದರಿಂದ ಭದ್ರನಿಗೆ ಇದ್ದ ಪ್ರತಿಕೂಲ ಪರಿಸ್ಥಿತಿಯು ಅನುಕೂಲ ಪರಿಸ್ಥಿತಿಯಾಗದೆ ಬದಲಾಗುತ್ತದೆ. ಆದರೆ ಭದ್ರನು ಅಣ್ಣ–ಅತ್ತಿಗೆಗೆ ವಚನ ನೀಡಿದಂತೆ ಮರಿಯಪ್ಪನ ಮನೆಗೆ ಸಾಲ ತೀರಿಸಲು ಜೀತದಾಳಾಗಿ ಸೇರುತ್ತಾನೆ. ಕೊಟ್ಟ ಮಾತಿಗೆ ಕಟ್ಟು ಬಿದ್ದು ತನ್ನ ಪೌರುಷವನ್ನು ಅಡಗಿಸಿಕೊಳ್ಳುತ್ತಾನೆ.

ಕೊನೆಗೆ ಲಕ್ಷ್ಮಿಯನ್ನು ಮದುವೆಯಾಗಲು ಹೊರಡುತ್ತಾನೆ. ಮರಿಯಪ್ಪನು ಈ ವಿಚಾರ ಇಟ್ಟುಕೊಂಡು ಅಣ್ಣನಿಂದಲೇ ತಮ್ಮನ ಕೊಲೆ ಮಾಡಿಸಲು ಮತ್ತೆ ಸಂಚು ರೂಪಿಸುತ್ತಾನೆ. ಈ ಸಂಚಿಗೆ ಲಕ್ಷ್ಮಿಯು ಬಲಿಯಾಗುತ್ತಾಳೆ. ಇದರಿಂದ ಮನನೊಂದ ಮರಿಯಪ್ಪ ಬದಲಾಗುತ್ತಾನೆ. ಕೊನೆಗೆ ಭದ್ರಿಯು ಲಕ್ಷ್ಮಿಗೆ ನೀಡಿದ ಮಾತಿನ ಪ್ರಕಾರ **ಜೈ ಜವಾನ್ ಜೈ ಕಿಸಾನ್** ಎಂಬಂತೆ ಸೈನ್ಯಕ್ಕೆ ಸೇರುತ್ತಾನೆ. ಇಲ್ಲಿಗೆ ನಾಟಕ ಮುಕ್ತಾಯವಾಗುತ್ತದೆ.

**ಸಂಪತ್ತಿಗೆ ಸವಾಲ್ ನಾಟಕದ ಜನಪ್ರಿಯತೆ**

ಒಮ್ಮೆ ಈ ನಾಟಕವನ್ನು ವೀಕ್ಷಿಸಿದ ರಾಜಕುಮಾರ್‌ರವರು ತುಂಬಾ ಖುಷಿ ಪಟ್ಟು ಈ ನಾಟಕವನ್ನು ಚಲನಚಿತ್ರವಾಗಿ ತರಲು ಕೇಳಿಕೊಂಡರಂತೆ. ಹಾಗೆಯೇ ಭದ್ರಿಯ ಪಾತ್ರದಲ್ಲಿ ಅಭಿನಯಿಸಲು ಬಯಸಿದರು. ಮುಂದೆ "ಸಂಪತ್ತಿಗೆ ಸವಾಲ್" ಸಿನಿಮಾ ಆಗಿ ಭರ್ಜರಿ ಯಶಸ್ವಿಯಾಯಿತು. ತೆಲುಗು, ತಮಿಳು, ಮಳೆಯಾಳಿ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ಏಕಕಾಲದಲ್ಲಿ ಚಿತ್ರವಾಯಿತು. ಹಲವು ಭಾಷೆಗಳಲ್ಲಿ ಚಲನಚಿತ್ರವಾಗಿ ಬಂದ ಕೆಲವೇ ಕನ್ನಡ ಚಿತ್ರಗಳಲ್ಲಿ ಇದು ಒಂದಾಯಿತು. "ಒಮ್ಮೆ ಬಿಜಾಪುರ ಜಿಲ್ಲೆಯ ಕಲಕೇರಿಯಲ್ಲಿ ಈ ನಾಟಕದ ಪ್ರಯೋಗ ನಡೆದಿತ್ತು. ಒಬ್ಬ ಯುವ ಪ್ರೇಕ್ಷಕ ಒಂದು ನಾಯಿಯನ್ನು ಕರೆದುಕೊಂಡು ಬಂದು ಅದಕ್ಕೂ ಟಿಕೆಟ್ ಕೊಡಿರಿ ಎಂದು ಕೇಳಿದ. ಪ್ರೇಕ್ಷಕನ ವರ್ತನೆ ನೋಡಿ ಎಲ್ಲರಿಗೂ ಅಚ್ಚರಿಯೇ ಅಚ್ಚರಿ. ನಾನು ಈ ನಾಟಕ ನೋಡಲು ದಿನಾಲು ಬರುತ್ತಿದ್ದೇನೆ ಇದು ನಮ್ಮಪ್ಪನಿಗೆ ಗೊತ್ತಾಗಿ ನಾಯಿಯೊಂದಿಗೆ ರಾತ್ರಿ ಹೊತ್ತು

ಹೊಲ ಕಾಯಲು ಕಳುಹಿಸಿದ್ದಾನೆ. ನಾನು ನಾಯಿ ಕೈಬಿಟ್ಟರೆ ಅದು ಮನೆಗೆ ಹೋಗುತ್ತದೆ ಆದ್ದರಿಂದ ನನ್ನ ನಾಯಿಗೂ ಟಿಕೆಟ್ ಕೊಟ್ಟು ಅದು ನನ್ನೊಂದಿಗೆ ಥಿಯೇಟರ್ ಒಳಗೆ ಬರಲು ಅನುಮತಿ ಕೊಡಬೇಕು" ಎಂದು ಅದಕ್ಕೂ ಟಿಕೆಟ್ ಕೊಡುವಂತೆ ಪರಿಪರಿಯಾಗಿ ವಿನಂತಿಸಿದ. ಮ್ಯಾನೇಜರ್ ಇದನ್ನು ನಿರಾಕರಿಸಿದ. ಅಷ್ಟೊತ್ತಿಗೆ ಆ ಯುವಕನ ತಂದೆ ತಾಯಿಗಳು ನಾಟಕ ನೋಡಲು ಬಂದರಂತೆ! ಯುವಕ ನಾಯಿಯೊಂದಿಗೆ ಪರಾರಿಯಾದ.

ಇಂತಹ ಹಲವು ಸ್ವಾರಸ್ಯಕರವಾದ ಉದಾಹರಣೆಗಳು ಧುತ್ತರಗಿ ಅವರ ದೀರ್ಘ ಅನುಭವದ ಬತ್ತಳಿಕೆಯಲ್ಲಿದೆ. ಈ ನಾಟಕದಲ್ಲಿ ಭದ್ರನಿಂದ ಆರಂಭವಾದ ವೈಯಕ್ತಿಕ ಬಂಡಾಯ ಕೊನೆಯಲ್ಲಿ ಸಾಮೂಹಿಕ ಸ್ವರೂಪ ತಾಳಿ ಧನಿಕರ ದರ್ಪ ಶಕ್ತಿಯಾಗಿ ನಿಲ್ಲುತ್ತದೆ. ಬಡವರ ಪ್ರತಿನಿಧಿಯಾಗಿ ನಿಂತ ಭದ್ರನ ಹೋರಾಟದಲ್ಲಿ ಸಾಮೂಹಿಕ ಶಕ್ತಿ ಅಡಗಿರುವುದನ್ನು ಗುರುತಿಸಬಹುದು; [5]"ಸಂಪತ್ತಿನ ಕೇಂದ್ರೀಕರಣವೇ ಅಸಮಾನತೆಗೆ ಕಾರಣ. ಒಡೆಯ ಬಡವನನ್ನು ಶೋಷಿಸುತ್ತಾನೆ. ಹೀಗಾಗಿ ಸಮಾಜದ ಮೂಲಭೂತ ಸಮಸ್ಯೆಗಳು ಬಯಲಿಗೆ ಬಂದು ಹೋರಾಟದ ಮೂಲಕ ಯಶಸ್ಸು ಕಂಡಿದೆ." ಎಂಬ ಗುಡಿಹಳ್ಳಿ ನಾಗರಾಜರ ಅಭಿಪ್ರಾಯ ಸೂಕ್ತವಾಗಿದೆ.

ಸಂಪೂರ್ಣವಾಗಿ ವರ್ಗ ಸಂಘರ್ಷದ ವಸ್ತುವುಳ್ಳ ಪ್ರಥಮ ನಾಟಕ ಧುತ್ತರಗಿ ಅವರ "ಸಂಪತ್ತಿಗೆ ಸವಾಲು" ಸಿರಿವಂತರ ದೌರ್ಜನ್ಯಕ್ಕೆ ಸವಾಲು ಹಾಕುವ ಭದ್ರ ತನ್ನ ಛಲ ತ್ಯಾಗ, ಪ್ರಾಮಾಣಿಕತೆಯಿಂದಲೇ ಕೊನೆಯದಾಗಿ ಜಯ ಪಡೆಯುತ್ತಾನೆ. ಭದ್ರ ವ್ಯಕ್ತಿಗತ ನೆಲೆಯಲ್ಲಿ ಹೋರಾಡುವ ಬದಲು ಅದನ್ನು ಸಾಮುದಾಯದ ಹೋರಾಟವಾಗಿ ಪರಿವರ್ತಿಸಬೇಕು ಎಂಬ ಮಾರ್ಕ್ಸವಾದ ಪ್ರೇರಿತವಾದ ಒಂದು ಸಣ್ಣ ಮೌಖಿಕ ಚರ್ಚೆ ವಿದ್ವಾಂಸರ ವಲಯದಲ್ಲಿ ನಡೆದಿದೆ. ಆದರೆ ಶೋಷಣೆಯ ವಿರುದ್ಧದ ಹೋರಾಟ ಮೊದಲು ವ್ಯಕ್ತಿಗತ ನೆಲೆಯಲ್ಲೇ ಮೂಡುವುದರಿಂದ ಮೂಲಭೂತ ಸಮಸ್ಯೆಯತ್ತ ಗಮನ ಸೆಳೆಯುವ ಪ್ರಥಮ ನಾಟಕವಾಗಿಯೂ ಅದಕ್ಕೆ ಚಾರಿತ್ರಿಕ ಮಹತ್ವವಿದೆ. ಹಳ್ಳಿಯ ಸಹಜ ಪಾತ್ರಗಳು, ಸಿರಿವಂತನ ಮಗಳ ಒಲುಮೆಯ ಸುಳಿಯಲ್ಲಿ ಬೀಳುವಂತ ನಾಟಕೀಯ ಸನ್ನಿವೇಶಗಳಿಂದ ನಾಟಕವು ಸೋಪಜ್ಞ ಪ್ರಯೋಗವಾಗಿ ಉಳಿಯಿತು. ಹಲವಾರು ಪ್ರಸಿದ್ಧ ನಾಟಕ ಕಂಪನಿಗಳಲ್ಲಿ ಪ್ರಯೋಗವಾದ **'ಕ್ಲಾಸಿಕ್ ಮಾಸ್ಟರ್‌ಪೀಸ್ ಸಂಪತ್ತಿಗೆ ಸವಾಲು'** ಎನ್ನುವ ಹೆಗ್ಗಳಿಕೆ ಹೊಂದಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ, ವೃತ್ತಿ ನಾಟಕಗಳು ವರ್ಗ ಸಂಘರ್ಷವನ್ನು ಸರಳವಾದ ಶೈಲಿಯಲ್ಲಿ ಸಹೃದಯರಿಗೆ ಮುಟ್ಟಿಸುವಲ್ಲಿ ಯಶಸ್ಸನ್ನು ಕಂಡಿವೆ. ಮಾರ್ಕ್ಸವಾದಿ ಚಿಂತನೆಯನ್ನು ಮೇಳೈಸಿಕೊಂಡ ಸಾಹಿತ್ಯ ಕೃತಿಗಳು ಬೌದ್ಧಿಕ ವಲಯಕ್ಕೆ ಮಾತ್ರ ಸೀಮಿತವಾದರೆ ನಿಜಾರ್ತದಲ್ಲಿ ಅನಕ್ಷರಸ್ಥ ಶ್ರೀಸಾಮಾನ್ಯನಿಗೂ ಈ ಚಿಂತನೆಗಳನ್ನು ಹಂಚುವಲ್ಲಿ ಈ ಸಾಮಾಜಿಕ ನಾಟಕವು ಯಶಸ್ವಿಯಾಗಿದೆ. ಶ್ರೀಸಾಮನ್ಯನಿಗೂ ಹಂಚುವಲ್ಲಿ ಹಾಗೂ ರಾಷ್ಟ್ರೀಯತೆಯ ಅಂಶಗಳು ವ್ಯಂಗ್ಯಾರ್ಥದಲ್ಲಿ ಪ್ರಯೋಗಗೊಂಡು ಜನರಲ್ಲಿ ರಾಷ್ಟ್ರೀಯತೆಯು ಕುಂದಿರುವುದನ್ನು ತಿಳಿಸುತ್ತದೆ.

**ಕೊನೆ ಟಿಪ್ಪಣಿಗಳು**

1. ಗುಡಿಹಳ್ಳಿ ನಾಗರಾಜ. (2000). ರಂಗ ನಾಟಕ ಪ್ರಯೋಗ (ಪ್ರಯೋಗ–ಸಾರ್ಥಕತೆ). ಶಕ್ತಿ ಎಂಟರ್ಪ್ರೈಸಸ್, ಬೆಂಗಳೂರು.
2. ಭಾರತದಲ್ಲಿ ಭ್ರಷ್ಟಚಾರ ಏರಿಕೆ. ಎಷ್ಟನೇ ಸ್ಥಾನ?. (2021). ಕನ್ನಡ ಪ್ರಭಾ ಪತ್ರಿಕೆ (ಜಾಲತಾಣ ಮಾಹಿತಿ).
3. ಭಾರತದಲ್ಲಿ ಅತ್ಯಾಚಾರ ವಿಕೀಪೀಡಿಯ. (2020) ಸೀಮಾ ಆರ್, ಎನ್‌ಸಿಆರ್‌ಬಿ ರಿಪೋರ್ಟ್ (ಜಾಲತಾಣದ ಮಾಹಿತಿ)
4. ರಂಗನಾಥ್. ಹೆಚ್.ಕೆ. (2014). ಕರ್ನಾಟಕ ರಂಗಭೂಮಿ. ಹೇಮಂತ ಸಾಹಿತ್ಯ, ಬೆಂಗಳೂರು. ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು. ಪುಟ.ಸಂ: 201.
5. ಹುಸೇನಪ್ಪ ನಾಯಕ. (2019). ಭಾರತ ಸಂವಿಧಾನ. ಸೋಮು ಪ್ರಕಾಶನ, ಸಿಂಧನೂರು.

**ಪರಾಮರ್ಶನ ಗ್ರಂಥಗಳು**


- ಅಕ್ಷರ ಕೆ.ವಿ. (1998). ಮಾವಿನ ಮರದಲ್ಲಿ ಬಾಳೆಹಣ್ಣು. (ನಾಟಕ ರಂಗಭೂಮಿ ಕುರಿತ ಬರಹಗಳು) ಅನನ್ಯ ಪಬ್ಲಿಕೇಶನ್ಸ್, ಬೆಂಗಳೂರು.
- ಗುಡಿಹಳ್ಳಿ ನಾಗರಾಜ. (2000). ರಂಗ ನಾಟಕ ಪ್ರಯೋಗ (ಪ್ರಯೋಗ–ಸಾರ್ಥಕತೆ). ಶಕ್ತಿ ಎಂಟಪ್ರೈಸರ್ಸ್, ಬೆಂಗಳೂರು.
- ಧುತ್ತಗಿರಿ. ಪಿ.ಬಿ. (1999). ರಂಗಸಂಪನ್ನರು ಮಾಲಿಕೆ. ಡಾ. ವೀರಣ್ಣ ರಾಜೂರ. ಕರ್ನಾಟಕ ನಾಟಕ ಅಕಾಡೆಮಿ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.
- ಶ್ರೀನಿವಾಸಮೂರ್ತಿ. ಕಾ.ವೆಂ. (2013). ರಂಗ ಸಂವಾದ (ನಾಟಕ ವಿಮರ್ಶೆ) ಮೇಘ ಪಬ್ಲಿಕೇಶನ್ಸ್, ಬೆಂಗಳೂರು
- ಮರುಳಸಿದ್ದಪ್ಪ. ಕೆ. (2013). ಆಧುನಿಕ ಕನ್ನಡ ನಾಟಕ. ಅಂಕಿತ ಪುತ್ತಕ ಶ್ಯಾಮಸಿಂಗ್ ಕಾಂಪ್ಲೆಕ್ಸ್, ಬೆಂಗಳೂರು.
- ರಂಗನಾಥ್. ಹೆಚ್.ಕೆ. (2014). ಕರ್ನಾಟಕ ರಂಗಭೂಮಿ. ಹೇಮಂತ ಸಾಹಿತ್ಯ. ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು.
- ಶ್ರೀನಿವಾಸರಾಜು. ದಾಮೋದರಶೆಟ್ಟಿ, ಸಂ.ಚಿ. (2006). ಸುವರ್ಣ ಸಾಹಿತ್ಯ ಗ್ರಂಥಮಾಲೆ. ಸುವರ್ಣ ನಾಟಕ (ಪೂರ್ಣಾವಧಿ) ಭಾಗ–2 ಕನ್ನಡ ಸಂಸ್ಕೃತಿ ಇಲಾಖೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.